ಕರ್ನಾಟಕ ಸರ್ಕಾರ

ಸಂಖ್ಯೆ:ಸಿಐ 207 ಐಎಪಿ 2026

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:24.03.2026

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

**ವಿಷಯ:** ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1696(1903) ಕ್ಕೆ ಉತ್ತರ ಒದಗಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1696(1903) ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

ಕೆ. ನದೀಮ್ 24/3

(ಕೆ.ನದೀಮ್ ಅಹ್ಮದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಕೈ.ಅ)

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1696 (1903) |
| ಮಾನ್ಯ ಸದಸ್ಯರ ಹೆಸರು | : | ಡಾ|| ಎಂ.ಜಿ. ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಅಡಿಯಲ್ಲಿ ಗುರುತಿಸಲಾದ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಪ್ರಸ್ತುತ ಹಂಚಿಕೆಗಾಗಿ ಸಿದ್ಧವಾಗಿರುವ (Allotment–ready) ಖಾಲಿ ಪ್ಲಾಟ್ ಗಳ ಒಟ್ಟು ಸಂಖ್ಯೆ ಎಷ್ಟು: (ಕೈಗಾರಿಕಾ ಪ್ರದೇಶವಾರು ವಿವರ ನೀಡುವುದು)</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಅಡಿಯಲ್ಲಿ ಬೀದರ ಜಿಲ್ಲೆಯಲ್ಲಿ ನಿರ್ಮಿಸಲಾದ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನಗಳು ಹಂಚಿಕೆಗಾಗಿ ಲಭ್ಯವಿರುವ ಮಾಹಿತಿ ಈ ಕೆಳಗಿನಂತಿರುತ್ತದೆ:
<table>
<tr><th>ಕೈಗಾರಿಕಾ ಪ್ರದೇಶ</th><th>ಲಭ್ಯವಿರುವ ಜಮೀನು</th><th>ವಿವರ</th></tr>
<tr><td>ಕೊಳಾರ ಕೈಗಾರಿಕಾ ಪ್ರದೇಶ ಹಂತ-2</td><td>146.00 ಎಕರೆ</td><td>ಈ ಪೈಕಿ ಈ ಕೆಳಕಂಡಂತೆ ಮೀಸಲಿಡಲಾಗಿದೆ:<br>1. ಮಹಿಳಾ ಪಾರ್ಕ್‌ಗಾಗಿ 40.00 ಎಕರೆ ಜಮೀನು (187 ನಿವೇಶನಗಳು ಲಭ್ಯವಿವೆ)<br>2. ಆಟೋನಗರ ಪ್ರದೇಶಕ್ಕಾಗಿ 10.00 ಎಕರೆ ಜಮೀನು<br>3. ಅಗ್ರಿಕಲ್ಚರ್ ಎಕ್ಯುಪ್‌ಮೆಂಟ್ಸ್ ಗಾಗಿ 50.00 ಎಕರೆ</td></tr>
</table></td></tr>
<tr><td>ಆ)</td><td>ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯ ಕೈಗಾರಿಕಾ ಪ್ರದೇಶಗಳಲ್ಲಿ ಹೊಸ ಹೂಡಿಕೆದಾರರಿಗೆ ಒಟ್ಟು ಎಷ್ಟು ಎಕರೆ ಜಾಗ ಅಥವಾ ಪ್ಲಾಟ್‌ಗಳನ್ನು ಹಂಚಿಕೆ ಮಾಡಲಾಗಿದೆ: ಇದರ ಮೂಲಕ ಜಿಲ್ಲೆಗೆ ಹರಿದು ಬಂದಿರುವ ಒಟ್ಟು ಹೂಡಿಕೆ ಮೊತ್ತ ಎಷ್ಟು (ವರ್ಷವಾರು ಹಾಗೂ ಪ್ರದೇಶವಾರು ಮಾಹಿತಿ ನೀಡುವುದು)</td><td>ಬೀದರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ 2023-24 ರಿಂದ ಇಲ್ಲಿಯವರೆಗೆ (ಫೆಬ್ರುವರಿ-2026 ರ ಅಂತ್ಯದವರೆಗೆ) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (SHLCC) ಮತ್ತು ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ (SLSWCC) ಒಟ್ಟು 5 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರೂ.79.41 ಕೋಟಿ ಬಂಡವಾಳ ಹೂಡಿಕೆ ನಿರೀಕ್ಷಿಸಲಾಗಿದೆ. ಅನುಮೋದನೆಯಾದ ಯೋಜನೆಗಳು ಇನ್ನೂ ಅನುಷ್ಠಾನದ ವಿವಿಧ ಹಂತಗಳಲ್ಲಿರುತ್ತವೆ.<br><br>ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.<br><br>ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಕೊಳಾರ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆ ಮಾಡಲು ಅನುಮೋದನೆಯಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ:
<table>
<tr><th>ಕ್ರಮ ಸಂ</th><th>ಘಟಕದ ಸಂಖ್ಯೆ</th><th>ವಿಸ್ತೀರ್ಣ ಎಕರೆ ಗಳಲ್ಲಿ</th><th>ವರ್ಷ</th><th>ಬಂಡವಾಳ ಕೋಟಿ ಗಳಲ್ಲಿ</th></tr>
<tr><td>1</td><td>ಮೇ: ಶ್ರೀ ಮೆಟಲ್ ಪ್ರೋಡಕ್ಟ್</td><td>4.00</td><td>2023-24</td><td>24.00</td></tr>
</table></td></tr>
</table>

| | | | | |
|---|---|---|---|---|
| 2 | ಮೇ: ಶ್ರೀ ಕೇತಕಿ ವಾಹನ ಉದ್ಯೋಗ & ಅಗ್ರೀಕಲ್ಚರ್. | 2.00 | 2024-25 | 18.00 |
| 3 | ಮೇ: ಬೀದರ ಫೇಬ್ರಿಕೇಶನ್ ವರ್ಕ್ಸ್. | 2.00 | 2024-25 | 22.00 |

| | | |
|---|---|---|
| ಇ) | ಕೈಗಾರಿಕಾ ಪ್ಲಾಟ್‌ಗಳನ್ನು ಹಂಚಿಕೆ ಮಾಡಿಕೊಂಡಿದ್ದರೂ ನಿಗಧಿತ ಅವಧಿಯೊಳಗೆ ಉತ್ಪಾದನೆ ಪ್ರಾರಂಭಿಸದ ಘಟಕಗಳ ಸಂಖ್ಯೆ ಎಷ್ಟು; ಅಂತಹ ಘಟಕಗಳ ವಿರುದ್ಧ ಜಾಗದ ಹಂಚಿಕೆಯನ್ನು ರದ್ದುಗೊಳಿಸಿ ಹೊಸ ಹೂಡಿಕೆದಾರರಿಗೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಕೆ.ಐ.ಎ.ಡಿಬಿ ವತಿಯಿಂದ ಗುತ್ತಿಗೆ ಕರಾರು ಪತ್ರದ ನಿಬಂಧನೆಗಳ ಪ್ರಕಾರ ಗುತ್ತಿಗೆ ಕರಾರು ಪತ್ರ ನೆರವೇರಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಒಳಗಾಗಿ ತಮ್ಮ ಉದ್ದೇಶಿತ ಯೋಜನೆ ಅನುಷ್ಠಾನಗೊಳಿಸಬೇಕಾಗಿರುತ್ತದೆ. ತಪ್ಪಿದ್ದಲ್ಲಿ ಕೆಐಎಡಿ ಕಾಯ್ದೆಯ Section 34 (B) of the KIAD Act, 1966 ರಂತೆ ಕ್ರಮ ಕೈಗೊಳ್ಳಲಾಗುತ್ತದೆ.<br><br>ಬೀದರ ಜಿಲ್ಲೆಯಲ್ಲಿನ ಕೈಗಾರಿಕಾ ಪ್ರದೇಶಗಳಲ್ಲಿ ಗುತ್ತಿಗೆ ನಿಯಮಾನುಸಾರ ಯೋಜನೆ ಅನುಷ್ಠಾನಗೊಳಿಸದೇ ಇರುವಂತಹ ನಿವೇಶನಗಳಿಗೆ 34-ಬಿ ನೋಟಿಸ್ ನೀಡಿದ್ದು ವಿವರವನ್ನು **ಅನುಬಂಧ-2** ರಲ್ಲಿ ಮತ್ತು 34-ಬಿ ನೋಟಿಸ್ ರಡಿಯಲ್ಲಿ ಮಂಡಳಿಗೆ ಹಿಂಪಡೆದಿರುವ ನಿವೇಶನದ ಮಾಹಿತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ. |
| ಈ) | ಗಡಿ ಜಿಲ್ಲೆಯಾದ ಬೀದರ್‌ನಲ್ಲಿ ಖಾಲಿ ಇರುವ ಕೈಗಾರಿಕಾ ಪ್ಲಾಟ್ ಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಲು ಮತ್ತು ಹೂಡಿಕೆದಾರರನ್ನು ಆಕರ್ಷಿಸಲು ಸರ್ಕಾರ ಯಾವುದೇ ವಿಶೇಷ ಪ್ರೋತ್ಸಾಹಕ ಯೋಜನೆ (Special Incentive Package) ಅಥವಾ ರಿಯಾಯಿತಿಗಳನ್ನು ಜಾರಿಗೆ ತಂದಿದೆಯೇ ಇದ್ದರೆ ಅದರ ವಿವರವೇನು: | ಬೀದರ ಜಿಲ್ಲೆಯನ್ನು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆ ಎಂದು ವಲಯ-1 ರಲ್ಲಿ ವರ್ಗೀಕರಿಸಿ, ಹೂಡಿಕೆಗಳನ್ನು ಆಕರ್ಷಿಸಲು ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.<br><br>ಅಲ್ಲದೇ, ಡಾ. ನಂಜುಂಡಪ್ಪ ವರದಿ ಪ್ರಕಾರ ಬರುವ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚುವರಿ 5% ಮತ್ತು ಹೆಚ್ಚು ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚುವರಿ 3% ಸಹಾಯಧನವನ್ನು ವಿಸ್ತರಿಸಲಾಗುತ್ತಿದೆ. |
| ಉ) | ಜಿಲ್ಲೆಯ ಕೈಗಾರಿಕೆಗಳಲ್ಲಿ ಸ್ಥಳೀಯ ಯುವಕರಿಗೆ ಶೇ.70-80 ರಷ್ಟು ಉದ್ಯೋಗ ನೀಡಬೇಕೆಂಬ ಸರೋಜಿನಿ ಮಹಿಷಿ ವರದಿ ಅನ್ವಯದ ಷರತ್ತನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸರ್ಕಾರ ಹೊಸ ನಿಯಮಾವಳಿ ರೂಪಿಸುವ ಯೋಜನೆ ಹೊಂದಿದೆಯೇ | ನೂತನ ಕೈಗಾರಿಕಾ ನೀತಿ 2025-30 ರನ್ವಯ ಕೈಗಾರಿಕೆಗಳಲ್ಲಿ ಉದ್ಯೋಗ ಸೃಷ್ಟಿಗೆ ಈ ಕೆಳಗಿನಂತೆ ಮಾನದಂಡಗಳನ್ನು ವಿಧಿಸಿ, ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕೈಗಾರಿಕೆಗಳಿಗೆ ನೀಡಲಾಗುತ್ತಿದೆ:<br><br>ಎಲ್ಲಾ ಹೊಸ ಕೈಗಾರಿಕಾ ಹೂಡಿಕೆ ಯೋಜನೆಗಳು ಸಾಧ್ಯವಾದಷ್ಟು ಅತಿ ಹೆಚ್ಚು ನೇರ ಉದ್ಯೋಗಾವಕಾಶಗಳನ್ನು ಸೃಜಿಸಬೇಕು. ಈ ಕೈಗಾರಿಕೆಗಳಲ್ಲಿ ಒಟ್ಟು ಕನಿಷ್ಠ 70% (ಒಟ್ಟು ಆಧರಿಸಿ) ಉದ್ಯೋಗಾವಕಾಶ ಕನ್ನಡಿಗರಿಗೆ ಇರಬೇಕು ಹಾಗೂ ಗ್ರೂಪ್-ಡಿ ಉದ್ಯೋಗಗಳು 100% ಕನ್ನಡಿಗರಿಗೆ ನೀಡಬೇಕು: |

**ಸಂಖ್ಯೆ: ಸಿಐ 207 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

ಅನುಬಂಧ-1. Anx-LCQ-1696(1908)

Detalis of projects approved in SHLCC & SLSWCC from 2023-24 to 2025-26 (Up to 28.02.2026) -Bidar district

| Sl. No. | Committee | Company Name | Project Location | Product | District | Date of Approval | Mtg No | Investment (INR Cr) | Employ ment (Nos.) | Land (Acres) | Year | KIADB / Own Land | Status As on Date | Categr |
|---|---|---|---|---|---|---|---|---|---|---|---|---|---|---|
| 1 | SLSWCC | M/s MMN Industry H No 68 Mallinath Baba Nivas, Opp to Basava Mantap Kolhar, Kolhar Post, Bidar 585402 | 7980 Sq.mtrs of land at Plot No.16-B of Kolhar Industrial Area, Bidar District | Electrical Poles, Fencing Plates, Fencing Tiles, Parking Tiles and other allied products | Bidar | 21 06 2024 | 146 | 18 | 43 | 1 97 | 2024-25 | KIADB | Under Implementation | General |
| 2 | SLSWCC | M/s Sri Veerabhadreshwar Trading Co Plot No 98A, , Bidar 585330 | 4 acres of land at Plot No 98-A, Humnabad Industrial Area, Bidar District | Bulk Drugs | Bidar | 01.02.2025 | 151 | 11.96 | 0 | 0 | 2024-25 | KIADB | Under Implementation | General |
| 3 | SLSWCC | M/s KSHS COACH BUILDER & Co Sakshi Nivas, Near Mathe Manikeshwari New Adarsh Colony, Bidar - 585401 | 2 acres of land at Kolhar Industrial Area, Bidar District | Manufacture of Agriculture implements & Equipment | Bidar | 28.3.2025 | 152 | 17.3 | 600 | 2 | 2024-25 | KIADB | Under Implementation | General |
| 4 | SLSWCC | M/s KETAKI VAHAN UDYOG & Agri tech Plot No 365 Near Geodesic Techniques, Bidar 585403 | 2 acres of land at Kolhar 2nd Phase Industrial Area, Bidar District | Manufacture of Agriculture implements & Equipment | Bidar | 28.3.2025 | 152 | 16.65 | 102 | 2 | 2024-25 | KIADB | Under Implementation | General |
| 5 | SLSWCC | M/s. Bidar Fabrication Industry H No 225/1, Bagalur Road Kannur, Bangalore South, Bangalore 562149 | 2 acres of land at Kolhar 2nd Phase Industrial Area, Bidar District | General Engineering and Fabrication unit | Bidar | 28.3.2025 | 152 | 15 5 | 25 | 2 | 2024-25 | KIADB | Under Implementation | Backward Classes (1 & 2A) / Minority |

ಅನುಬಂಧ-2

ಬೀದರ್ ಜಿಲ್ಲೆಯಲ್ಲಿ 34-ಬಿ ನೋಟಿಸ್ ನೀಡಿರುವ ಪ್ರಕರಣಗಳು

| ಕ್ರ.ಸ | ಕಂಪನಿ ಹೆಸರು | ನಿವೇಶನ ಸಂಖ್ಯೆ | ವಿಸ್ತೀರ್ಣ (ಚ.ಮೀ ಗಳಲ್ಲಿ) | ಕೈ.ಪ್ರ |
|---|---|---|---|---|
| 1 | M/s Hotel Vilas | 35 | 1316 | Basavakalyan |
| 2 | M/s Surya Agro Industries | 310 | 4380 | Kolhar |
| 3 | M/s Nandan Industries | 309 | 4303.5 | Kolhar |
| 4 | M/s Alteramed Pharmacon LLP | 90 (Part)-1 | 20235 | Humnabad |
| 5 | KSRTC | 135-A | 16234 | Kolhar |
| 6 | M/a Saimax Industries, | 14 | 2990 | Humnabad |
| 7 | M/s Laxmi Dall Industries | 343 & 344 | 4000 | kolhar 2nd Phase |
| 8 | M/s. Manek Active Clay Pvt., Ltd | 65-B | 2022 | Humnabad |
| 9 | Karnataka State Road Transport Corporation | 16-B | 7980 | Kolhar |
| 10 | M/s. Z.K Fabrication, Prop: Syed Zaheeruddin S/o Syed Gulam | 65-A | 2022 | Humnabad |
| 11 | M/s Savithri Dall Mill | 65 | 4047 | Basavakalyan |
| 12 | M/s ELBS Pharma Pvt Ltd | 171, 172, 173 & 174 | 21000 | Humnabad |
| 13 | M/s Karnataka Silk Reeling Industries | 66-A | 2022 | Humnabad |
| 14 | M/s Somesh Enterprises | 91-P | 7988 | Humnabad |
| 15 | M/s Atmaram Leather Industries | 161 | 2010 | Humnabad |
| 16 | M/s Karanja Dall Industry | 365-P5 | 12139.4 | Kolhar |
| 17 | M/s Talampally Sortex Industry | 306 | 8071.25 | Kolhar |
| 18 | M/s Talampally Portens | 307 | 8031.25 | Kolhar |
| 19 | M/s Mayur Besan Industry | 303 | 2000 | Kolhar |

Secretary-II
Karnataka Industrial Areas Development Board,
Bengaluru-560 001

ಅನುಬಂಧ - 2

34–ಬಿ ನೋಟಿಸ್ ರನ್ವಯ ಮಂಡಳಿಗೆ ಹಿಂಪಡೆದಿರುವ ನಿವೇಶನ ವಿವರ

| ಕ್ರ.ಸ | ಕಂಪನಿ ಹೆಸರು | ನಿವೇಶನ ಸಂಖ್ಯೆ | ವಿಸ್ತೀರ್ಣ (ಚ.ಮೀ ಗಳಲ್ಲಿ) | ಕೈ.ಪ್ರ |
|---|---|---|---|---|
| 1 | M/s Hotel Vilas | 35 | 1316 | Basavakalyan |
| 2 | Sri Md Ayub Khan S/o Md Yaseen Khan | 172 & 173 | 223 | Basavakalyan |
| 3 | M/s Gajanana Fabrication Works | 64 | 4000 | Basavakalyan |
| 4 | M/s Zain Welding Works | 116 | 1000 | Basavakalyan |
| 5 | M/s Surya Agro Industries | 310 | 4380 | Kolhar |
| 6 | M/s Nandan Industries | 309 | 4303.5 | Kolhar |
| 7 | M/s Alteramed Pharmacon LLP | 90 (Part) 1 | 20235 | Humnabad |
| 8 | KSRTC | 135-A | 16234 | Kolhar |
| 9 | M/a Saimax Industries, | 14 | 2990 | Humnabad |
| 10 | M/s Laxmi Dall Industries | 343 & 344 | 4000 | kolhar 2nd Phase |
| 11 | M/s. Manek Active Clay Pvt., Ltd | 65-B | 2022 | Humnabad |
| 12 | Karnataka State Road Transport Corporation | 16-B | 7980 | Kolhar |

Secretary-II
Karnataka Industrial Areas Development Board,
Bengaluru-5[illegible]